# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರು ನಿಯಮ-72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:** ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 4 ರಲ್ಲಿ ಹುಬ್ಬಳ್ಳಿಯ ಗಬ್ಬೂರು ಕ್ರಾಸ್‌ನಿಂದ ಧಾರವಾಡದ ನರೇಂದ್ರ ಕ್ರಾಸ್‌ವರೆಗೆ ಬೈಪಾಸ್ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ವಿಸ್ತರಿಸಿಲ್ಲ. ಈ ಕಿರಿದಾದ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಓಡಾಡುತ್ತಿವೆ. ರಸ್ತೆ ಮಧ್ಯೆ ಡಿವೈಡರ್ ವ್ಯವಸ್ಥೆ ಇಲ್ಲ. ಕಳೆದ ಮೂರು ವರ್ಷಗಳಲ್ಲಿ ಅಪಘಾತದಿಂದಲೇ ಸುಮಾರು 416 ಜನರ ಪ್ರಾಣಹಾನಿಯಾಗಿರುವ ಬಗ್ಗೆ ವರದಿಯಾಗಿದೆ. ಅಮಾಯಕರ, ಸಾರ್ವಜನಿಕರ ಪ್ರಾಣಹಾನಿಯನ್ನು ತಪ್ಪಿಸಲು ಸರ್ಕಾರಕ್ಕೆ ಅನೇಕ ಸಲ ಮನವಿ ಮಾಡಲಾಗಿದೆ. ದಿನದಿನಕ್ಕೆ ಅಪಘಾತಗಳು ಸಂಭವಿಸುತ್ತವೆ. ಈ ವಿಷಯದ ಮಾನ್ಯ ಉಪ ಮುಖ್ಯಮಂತ್ರಿಯವರ (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರ) ಗಮನ ಸೆಳೆಯಬಯಸುತ್ತೇನೆ.

## ಸರ್ಕಾರದ ಹೇಳಿಕೆ

ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-4ರಲ್ಲಿ ಹುಬ್ಬಳ್ಳಿಯ ಗಬ್ಬೂರು ಕ್ರಾಸ್‌ನಿಂದ ಧಾರವಾಡದ ನರೇಂದ್ರ ಕ್ರಾಸ್ ವರೆಗಿನ 29.04 ಕಿ.ಮೀ. ಉದ್ದದ ಬೈಪಾಸ್ ರಸ್ತೆಯನ್ನು Build Operate and Transfer (BOT) ಆಧಾರದ ಮೇಲೆ ಮೆ: ನಂದಿ ಹೈವೇ ಡೆವಲಪ್ಪರ್ಸ್ ಇವರಿಗೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ, ಇವರಿಂದ ನೀಡಲಾಗಿರುತ್ತದೆ. ಸದರಿ ರಸ್ತೆಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ ಅಂದಿನ ಮಾನದಂಡಗಳಂತೆ 2 ಪಥದ ರಸ್ತೆಯನ್ನಾಗಿ ಸಂಸ್ಥೆಯು ತನ್ನ ವೆಚ್ಚದಲ್ಲಿ ನಿರ್ಮಿಸಿ, ಸದರಿ ಸಂಸ್ಥೆಯು ದಿನಾಂಕ: 6.5.1998 ರಿಂದ ದಿನಾಂಕ:05.05.2024 ರವರೆಗೆ ಈ ರಸ್ತೆಯ ಬಳಕೆದಾರರಿಂದ ಶುಲ್ಕ ಸಂಗ್ರಹಿಸಲು ಹಾಗೂ ಈ ಭಾಗದ ರಸ್ತೆಯನ್ನು ಐಆರ್‌ಸಿ ಮಾನದಂಡಗಳಂತೆ ನಿರ್ವಹಿಸಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ರಸ್ತೆಯ ನಿರ್ಮಾಣಕ್ಕಾಗಿ ಅವಶ್ಯವಿದ್ದ ಭೂಮಿಯನ್ನು ರಾಜ್ಯ ಸರ್ಕಾರದ ವತಿಯಿಂದ ಸ್ವಾಧೀನಪಡಿಸಿಕೊಡಲಾಗಿದೆ.

ಈ ಬೈಪಾಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ಹಾವೇರಿಯಿಂದ ಹುಬ್ಬಳ್ಳಿವರೆಗಿನ ರಸ್ತೆಯನ್ನು 4 ರಿಂದ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಧಾರವಾಡದಿಂದ ಬೆಳಗಾವಿವರೆಗೆ 6 ಪಥದ ರಸ್ತೆಯು ನಿರ್ಮಾಣವಾಗಿದೆ. ಈ ಎರಡೂ ರಸ್ತೆಗಳು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ವ್ಯಾಪ್ತಿಗೊಳಪಡುವ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ನಿರ್ಮಾಣವಾಗಿದ್ದು, ಸದರಿ ಸಂಸ್ಥೆಯ ವತಿಯಿಂದಲೇ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ಬೈಪಾಸ್ ರಸ್ತೆಯ ಹಿಂದಿನ ಹಾಗೂ ಮುಂಭಾಗದ ರಸ್ತೆಗಳು 4 ಹಾಗೂ 6 ಪಥದ ರಸ್ತೆಗಳಾಗಿದ್ದು, ಆದರೆ ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆ ಭಾಗವು ದ್ವಿಪಥ ರಸ್ತೆಯಾಗಿದ್ದು (Two lane without median) ಹೆಚ್ಚಿನ ವಾಹನ ಸಾಂದ್ರತೆ ಹಾಗೂ ವೇಗದ ಚಾಲನೆಯಿಂದ ಈ ಬೈಪಾಸ್ ರಸ್ತೆಯಲ್ಲಿ ಅಪಘಾತಗಳು ಸಂಭವಿಸಿ ಪ್ರಾಣಹಾನಿಗಳಾಗಿವೆ. ವಾಹನ ಸವಾರರ ಸುರಕ್ಷತೆಯನ್ನು ಕಾಪಾಡಲು ಹಾಗೂ ಸುಗಮ ವಾಹನ ಸಂಚಾರಕ್ಕೆ ಅನುಕೂಲವಾಗಿಸುವ ನಿಟ್ಟಿನಲ್ಲಿ ಈ ಬೈಪಾಸ್ ರಸ್ತೆಯನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು ಹಲವು ರೀತಿಯ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.

1. ಮೇಲ್ಕಂಡ ರಸ್ತೆಯನ್ನು 2 ಪಥದಿಂದ 6 ಪಥದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಸಂಬಂಧ ವಿವರವಾದ ಯೋಜನಾ ವರದಿಯನ್ನು (DPR) ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಅಂತಿಮ ಹಂತದಲ್ಲಿದೆ.

2. ಈ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಭೂಸಾರಿಗೆ ಮಂತ್ರಾಲಯದ ಸಚಿವರು ದಿನಾಂಕ 10-12-2019ರಂದು ರಾಜ್ಯಕ್ಕೆ ಭೇಟಿ ನೀಡಿದಾಗ ಚರ್ಚಿಸಲಾಗಿದ್ದು, ಮಾನ್ಯ ಕೇಂದ್ರ ಸಚಿವರು ಹಾಲಿ ಇರುವ ರಸ್ತೆಯ ಅಭಿವೃದ್ಧಿಯನ್ನು ವಾಹನ ಸಂಚಾರ ನಿರ್ಬಂಧಿಸದೇ ಅಭಿವೃದ್ಧಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲು ಸೂಚಿಸಿರುತ್ತಾರೆ.

3. ಸುರಕ್ಷತಾ ದೃಷ್ಟಿಯಿಂದ ಈ ಬೈಪಾಸ್ ರಸ್ತೆಯ ಭಾಗವನ್ನು ಈಗಿರುವ 2 ಪಥದಿಂದ 6 ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಮೆ: ನಂದಿ ಹೈವೇ ಡೆವಲಪ್ಪರ್ಸ್ ರವರು ಒಪ್ಪಿಗೆ ಪತ್ರ ನೀಡಬೇಕಾಗಿರುತ್ತದೆ. ಈ ಸಂಸ್ಥೆಯವರು ಹಲವಾರು ನಿಬಂಧನೆಗಳನ್ನು ವಿಧಿಸಿ ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ.

4. ಈ ಬೈಪಾಸ್ ರಸ್ತೆಯ ಅಭಿವೃದ್ಧಿಯನ್ನು NHDL ವತಿಯಿಂದ ಅಭಿವೃದ್ಧಿಪಡಿಸಲು ಸದರಿ ಸಂಸ್ಥೆಯೂ ಸಹ ಕೋರಿಕೆ ಸಲ್ಲಿಸಿರುತ್ತದೆ.

5. ದಿನಾಂಕ:03.02.2020 ರಂದು ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು, ಇವರ ಅಧ್ಯಕ್ಷತೆಯಲ್ಲಿ, NHDL ಹಾಗೂ NHAI ರವರೊಂದಿಗೆ ಅನೌಪಚಾರಿಕ ಸಭೆ ನಡೆಸಿದ್ದು, ಹುಬ್ಬಳ್ಳಿಯ ಗಬ್ಬೂರ ಕ್ರಾಸ್‌ನಿಂದ ಧಾರವಾಡದ ನರೇಂದ್ರ ಕ್ರಾಸ್‌ವರೆಗೆ ಬೈಪಾಸ್ ರಸ್ತೆಯನ್ನು, ಅಧೀಕ್ಷಕ ಅಭಿಯಂತರರು ಹಾಗೂ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ವೃತ್ತ, ಧಾರವಾಡ, ಇವರು NHDL ಹಾಗೂ NHAI ರವರೊಂದಿಗೆ ಜಂಟಿಯಾಗಿ ಸ್ಥಳ ಪರಿವೀಕ್ಷಣೆ ನಡೆಸಿ, 6 ಪಥದ ರಸ್ತೆ ಕಾಮಗಾರಿಯನ್ನು ಹಾಲಿ ವಾಹನ ಸಂಚಾರವನ್ನು ನಿರ್ಬಂಧಿಸದೇ ಸುರಕ್ಷಿತವಾಗಿ ಕೈಗೊಳ್ಳುವ ಬಗ್ಗೆ ವರದಿ ನೀಡಲು ಸೂಚಿಸಲಾಗಿದೆ.

6. ಅಧೀಕ್ಷಕ-ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳ ವೃತ್ತ, ಧಾರವಾಡ, ಇವರು ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯ ನಿರ್ವಹಣೆ ಮತ್ತು ಸುರಕ್ಷತೆಯ ಬಗ್ಗೆ ಮೆ: ನಂದಿ ಹೈವೇ ಡೆವಲಪ್ಪರ್ಸ್ ಇವರಿಗೆ ದಿನಾಂಕ:29.10.2018, 21.12.2018, 29.02.2019 ಮತ್ತು 12.04.2019 ರಂದು ನೋಟೀಸ್‌ಗಳನ್ನು ನೀಡಿರುತ್ತಾರೆ.

7. ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯ ಸುರಕ್ಷತೆ ಕುರಿತು ಸಮೀಕ್ಷೆ ಮಾಡಲು ಸದರಿ ರಸ್ತೆಯನ್ನು ಎರಡು ಬಾರಿ ದಿನಾಂಕ: 13.11.2018 ಮತ್ತು 31.03.2019 ರಲ್ಲಿ ಸೇಫ್ಟಿ ಆಡಿಟ್ ಮಾಡಿಸಲಾಗಿದ್ದು, ಅದರಲ್ಲಿ ನಮೂದಿಸಿರುವ ನ್ಯೂನತೆಗಳನ್ನು ಸರಿಪಡಿಸಲು ಮೆ: ಎನ್.ಹೆಚ್.ಡಿ.ಎಲ್. ರವರಿಗೆ ಪತ್ರ ವ್ಯವಹಾರ ಮಾಡಲಾಗಿದ್ದು, ಮುಖ್ಯ ಇಂಜಿನಿಯರ್ ರವರಿಂದ ವರದಿ ಸ್ವೀಕೃತಿಯಾದ ನಂತರ ಮುಂದಿನ ಕ್ರಮ ವಹಿಸಲಾಗುವುದು.

8. ಸದರಿ ರಸ್ತೆಯ Concession Period 2024 ರವರೆಗೆ ಇದ್ದು, ಸದರಿ ರಸ್ತೆಗೆ ಪರ್ಯಾಯ ರಸ್ತೆ (ತಡಸ್ ನಿಂದ ತೇಗೂರು) ನಿರ್ಮಿಸಲು Feasibility Study and Detailed Project Report ತಯಾರಿಸಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ. ಟೆಂಡರ್ ಕರೆಯಲಾಗಿದ್ದು, ಟೆಂಡರ್ ನಮೂದಿಸಲು ಅಂತಿಮ ದಿನಾಂಕವನ್ನು 24.02.2020 ಕ್ಕೆ ನಿಗದಿಪಡಿಸಲಾಗಿದೆ.

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ.

**ಸಂಖ್ಯೆ:** ಲೋಇ 46 ಸಿಐಎನ್‌ಹೆಚ್ 2020 (ಇ)